

ಮಗ ಲಿಯೊನಾರ್ಡ್ ಡಾರ್ವಿನ್ ಜೊತೆ ಎಮ್ಮಾ



ಮೊದಲ ಮಗ ವಿಲಿಯಮ್ಸ್ ಡಾರ್ವಿನ್‌ನೊಂದಿಗೆ ಚಾರ್ಲ್ಸ್ ಡಾರ್ವಿನ್

ಮದುವೆಯಾಗುತ್ತಿದ್ದಂತೆ ಮದುಮಕ್ಕಳು ಬಾಡಿಗೆ ಮನೆಗೆ ತೆರಳಿದರು. ಮನೆಯಲ್ಲಿ ಸಿರಿತನ ಎದ್ದು ಕಾಣುತ್ತಿತ್ತು. ಎಮ್ಮಾ ಪಿಯಾನೊ, ಡಾರ್ವಿನ್ನನ ಪ್ರಾಣಿ ಸಂಗ್ರಹ ಎಲ್ಲವೂ ಇಲ್ಲಿಗೆ ಬಂದವು. ಮನೆಯಲ್ಲಿ ಅಡುಗೆಯವನು ಮತ್ತು ಆಳುಕಾಳು ಎಲ್ಲಾ ಇದ್ದರು. ಡಾರ್ವಿನ್ ತಂದೆ ಗತಿಸಿದ ಮೇಲೆ ಅವರಿಗೆ ಇನ್ನೂ ಅಪಾರ ಹಣ, 232,000 ಪೌಂಡುಗಳು ದೊರೆತವು.

ದಂಪತಿಗೆ ಹತ್ತು ಮಕ್ಕಳಾದರು. ಅವರಲ್ಲಿ ಮೂವರು ಬಾಲ್ಯದಲ್ಲಿಯೇ ಸಾವನ್ನಪ್ಪಿದರು. ಹತ್ತು ವರ್ಷದ ಅವರ ಮುದ್ದಿನ ಮಗಳು ಅನಾರೋಗ್ಯಪೀಡಿತಳಾಗಿ ಇನ್ನಿಲ್ಲವಾದಾಗ ಡಾರ್ವಿನ್‌ಗೆ ದಿಕ್ಕುತೋರದಾಯಿತು. ಚರ್ಚ್ ಮೇಲಿದ್ದ ಅಲ್ಪ ಅಭಿಮಾನವೂ ಇಲ್ಲವಾಯಿತು. ಅಂದಿನಿಂದ ಮನೆಮಂದಿಯನ್ನು ಚರ್ಚ್ ಬಾಗಿಲವರೆಗೆ ಕರೆದೊಯ್ದು ತಾವು ಹಿಂದಿರುಗುತ್ತಿದ್ದರು. ಅವರ ಮೂರನೇ ಮಗು ಜನಿಸಿದ ಸಮಯದಲ್ಲಿ ದಂಪತಿ ಲಂಡನ್ನಿಗೆ ಹತ್ತಿರವಿರುವ ಡೌನ್ ಎಂಬ ಹಳ್ಳಿಯಲ್ಲಿ ದೊಡ್ಡ ಮನೆ ಕಟ್ಟಿಕೊಂಡು ಅಲ್ಲಿಯೇ ಇಡೀ ಜೀವನ ಕಳೆದರು. ಎರಡೂ ಕಡೆ ತಂದೆಯರಿಂದ ಅವರಿಗೆ ಅಪಾರ ಹಣ ಸಹಾಯ ದೊರಕಿತು. ಡಾರ್ವಿನ್ ತನ್ನ ವಾಕಿಂಗ್ ಸಲುವಾಗಿಯೇ ಮನೆಯ ಹಿಂದೆ ಮೂರು ಎಕರೆ ಜಮೀನನ್ನು ಕೊಂಡು 400 ಮೀಟರ್ ಉದ್ದದ ದಾರಿ ನಿರ್ಮಿಸಿದರು. ಇದು ಅವರ 'ಆಲೋಚನಾ ಪಥ' ಆಯಿತು.

ಎಮ್ಮಾ ಗಂಡನ ಹಿತರಕ್ಷಕಿ ಆಗಿದ್ದರು. ಬೆಳಿಗ್ಗೆ ಎದ್ದು ಡಾರ್ವಿನ್ ಅಧ್ಯಯನ ಮಾಡಿದ ನಂತರ ಎಮ್ಮಾ ಮನೆಗೆ ಬಂದಿದ್ದ ಕೌಟುಂಬಿಕ ಪತ್ರಗಳನ್ನು ಓದುತ್ತಿದ್ದರು. ಮಧ್ಯಾಹ್ನ ಊಟ ಮಾಡಿದ ಮೇಲೆ ಯಾವುದಾದರೂ ಕಾದಂಬರಿ ಅಥವಾ ಸರಳ ಬರಹಗಳನ್ನು ಅವರಿಗೆ ಓದಿಹೇಳುತ್ತಿದ್ದರು. ಸಂಜೆ ಏಳೂವರೆಗೆ ರಾತ್ರಿಯೂಟವಾದ ಮೇಲೆ ಅವರ ಮುಂದೆ ಎಮ್ಮಾ ಪಿಯಾನೊ ನುಡಿಸುತ್ತಿದ್ದರು. ಅದಾದ ಮೇಲೆ ಗಂಡ ಹೆಂಡತಿಯರು ಬ್ಯಾಕ್ ಗ್ಯಾಮನ್ ಆಟವಾಡುತ್ತಿದ್ದರು. ಡಾರ್ವಿನ್, ಅವರ ಸೋಲು ಗೆಲುವುಗಳನ್ನು ಬರೆದಿಡುತ್ತಿದ್ದರು! 'ಪಾಪ, ಅವಳು 2490 ಆಟಗಳಲ್ಲಿ ಗೆದ್ದಿದ್ದಾಳೆ, ನಾನು 2795 ಆಟಗಳಲ್ಲಿ ಗೆದ್ದಿದ್ದೇನೆ' ಎಂದು ದಾಖಲಿಸಿದ್ದಾರೆ.

1844ರಲ್ಲಿ ಡಾರ್ವಿನ್ ತಮ್ಮ ಸಿದ್ಧಾಂತದ ಬಗ್ಗೆ ಟಿಪ್ಪಣಿ ಬರೆದಿಟ್ಟಿದ್ದರು. ಅವರ ಆರೋಗ್ಯ ಹದಗೆಟ್ಟು, ಸಾವಿನ ಭೀತಿಯೂ ತಲೆದೋರಿತು. ಆಗ ಅವರು ತಮ್ಮ ಟಿಪ್ಪಣಿಯನ್ನು ಎಮ್ಮಾಳಿಗೆ ನೀಡಿ 'ನಾನು ಅಕಾಲ ಸಾವಿಗೆ ಈಡಾದರೆ ಇದನ್ನು ನೀನು ಪ್ರಕಟಿಸು' ಎಂದು ವಿನಂತಿ ಮಾಡಿದರು. ಜೊತೆಗೆ 400 ಪೌಂಡ್ ಹಣವನ್ನೂ ತೆಗೆದಿಟ್ಟಿದ್ದರು. ಆದರೆ ತಮ್ಮ ಎಲ್ಲಾ ಹೊತ್ತಿಗೆಗಳು ಪ್ರಕಟವಾಗುವವರೆಗೂ ಬದುಕಿದ್ದರು. ಎರೆಹುಳುಗಳನ್ನು ಕುರಿತು ಡಾರ್ವಿನ್ ಸಂಶೋಧನೆ ನಡೆಸಿದಾಗ ಅವು ಶಬ್ದಕ್ಕೆ ಯಾವ ಪ್ರತಿಕ್ರಿಯೆ ತೋರಿಸುತ್ತವೆ ಎಂಬ ಪ್ರಶ್ನೆ ಎದ್ದಾಗ ಎಮ್ಮಾ ಅವುಗಳ ಮುಂದೆ ಪಿಯಾನೊ ನುಡಿಸಿದ್ದರು.

1882ರಲ್ಲಿ 72 ವರ್ಷ ವಯಸ್ಸಿನ ಡಾರ್ವಿನ್ ಎಮ್ಮಾ ತೋಳತೆಕ್ಕೆಯಲ್ಲಿ ಅಸುನೀಗಿದರು. ಅವರ ದೇಹವನ್ನು ಸಕಲ ಮರ್ಯಾದೆಯೊಂದಿಗೆ ಲಂಡನ್ನಿನ ವೆಸ್ಟ್ ಮಿನ್‌ಸ್ಟರ್ ಅಬಿಯಲ್ಲಿ ಸಮಾಧಿ ಮಾಡಲಾಯಿತು. ಎಮ್ಮಾ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲಿಲ್ಲ. ಅವರು ತಮ್ಮ 88ನೇ ವಯಸ್ಸಿನಲ್ಲಿ (1896) ನಿಧನರಾದರು.

ಚಿತ್ರಕೃಪೆ: ವಿಕಿ ಕಾಮನ್ಸ್

ಪ್ರತಿಕ್ರಿಯಿಸಿ: feedback@sudha.co.in

